ಶ್ರೀ ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ನಾನು ನಿಯಮ ೩೩ಳಿಶ ಮೇಲೆ ವಿಷಯವನ್ನು ಕೊಟ್ಟಿದ್ದೆ. ನನ್ನ ಹೆಸರನ್ನು ತಾವು ಕರೆಯಲೇ ಇಲ್ಲ.

ಅಧ್ಯಕ್ಷರು.—ನಾನು ಕರೆದಾಗ ನೀವು ಅಬ್ಸೆಂಟ್ ಆಗಿದ್ದೀರಿ. ಇವತ್ತು ಇನ್ನೊಂದು ಸಾರಿ ಕೊಡಿ. ನಾಳೆಗೆ ಸೇರಿಸುತ್ತೇನೆ.

ಶ್ರೀ ಸಿ. ಭೈರೇಗೌಡ.—ಮಾನ್ಯ ಅಧ್ಯಕ್ಷರೇ, ನನಗೆ ಉತ್ತರ ಬಂದಿಲ್ಲ, ಯಾವಾಗ ತರಿಸಿ ಕೊಡುತ್ತೀರಿ.

ಅಧ್ಯಕ್ಷರು.—ಉತ್ತರವನ್ನು ತರಿಸಿಕೊಡುವುದು ಬಿಡುವುದು ನನಗೆ ಬಿಟ್ಟಿದ್ದು. ನಾನು ಉತ್ತರವನ್ನು ತರಿಸಿಕೊಡಬಹುದು ಅಥವಾ ಬಿಡಬಹುದು. ಇಟ್ ಈಸ್ ಮೈ ಡಿಸ್ಕ್ರಿಷನ್. ನೀವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ನಿಮಗೆ ಗೊತ್ತಿಲ್ಲವೇ ?

ಶ್ರೀ ಸಿ. ಭೈರೇಗೌಡ.—ನಾನು ಮಂತ್ರಿಯಾಗಿ ಕೆಲಸ ಮಾಡಿದ್ದರಿಂದಲೇ ಕೇಳುತ್ತಿರುವುದು: ತಾವು ಹೀಗೆ ಹೇಳಿದರೆ ಹೇಗೆ ?

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

೧೯೮೭ನೇ ಇಸವಿಯ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ.—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈಗ ಇರುವ ಕಾನೂನಿನಲ್ಲಿ Chief Secretaries of the concerned Zilla Parishad ಎಂದು ಸೇರಿಸಬೇಕು. ಆದ್ದರಿಂದ ಈ ತಿದ್ದುಪಡಿ ತರಲಾಗಿದೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

''೧೯೮೭ನೇ ಇಸವಿಯ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨

ಅಧ್ಯಕ್ಷರು.—''ಎರಡನೇ ಖಂಡವು ವಿಧೇಯಕದ ಅಂಗವಾಗಿರಂತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ ೨ ವಿಧೇಯಕಕ್ಕೆ ಸೇರಿಸಲ್ಪಟ್ಟಿತು